1) 195 ಗ್ರಾಮಗಳು.

2) 1 ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ ಮತ್ತು ಏಳು ಗ್ರಾಮಗಳಿಗೆ ಕೊಳವೆ ಬಾವಿ ಯೋಜನೆಗಳನ್ನು ಆಧ್ಯತೆಯ ಮೇರೆಗೆ ಮತ್ತು ಅನುದಾನದ ಲಭ್ಯತೆಗೆ ಒಳಪಟ್ಟು ತೆಗೆದುಕೊಳ್ಳಲು 1991-92ರ ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗಿದೆ.

ಮೂರು ಗ್ರಾಮಗಳ ನಳದ ನೀರು ಸರಬರಾಜು ಯೋಜನೆಗಳನ್ನು ೧೯೯೧-೯೨ರ ಅನುಬಂಧ-೪ನಲ್ಲಿ ಸೇರಿಸಲಾಗಿದೆ.

ಉಳಿದ ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಮುಂದಿನ ವರ್ಷಗಳಲ್ಲಿ ಕ್ರಮ ಕೈಗೊಳ್ಳಲಾಗುವುದು.

ಬಾಲವಾಡಿ ಕೇಂದ್ರಗಳು.

2988-ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಿಂದೆ ಇದ್ದ ಟಿ.ಡಿ.ಬಿ. ವತಿಯಿಂದ ನಡೆಯುತ್ತಿದ್ದ ಬಾಲವಾಡಿ ಕೇಂದ್ರಗಳೆಷ್ಟು?

ಆ) ಈಗ ಇವುಗಳನ್ನು ಯಾರು ನಡೆಸುತ್ತಿದ್ದಾರೆ?

ಇ) ಈ ಬಾಲವಾಡಿ ಕೇಂದ್ರಗಳನ್ನು ಪೂರ್ವ ಕೇಂದ್ರಗಳಾಗಿ ಪರಿವರ್ತಿಸಬಾರದೇಕೆ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 47

ಆ) ಈ ಹಿಂದೆ ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ನಡೆಸುತ್ತಿದ್ದು, ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರ ಮಂಡಲ್ ಪಂಚಾಯತಿಯವರು ನಡೆಸುತ್ತಿದ್ದಾರೆ.

ಇ) ಈ ಸಲಹೆಯನ್ನು ಪರಿಶೀಲಿಸಲಾಗುವುದು.

ನಿವೇಶನಗಳ ಹಂಚಿಕೆ.

3077-ಶ್ರೀ ಬಿ.ಎ. ಚೌಡರೆಡ್ಡಿ (ಚಿಂತಾಮಣಿ) :ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕು ಮುಂಗಾನ ಹಳ್ಳಿ ಹೋಬಳಿ ಇರಗಂಪಲ್ಲಿ ಮಂಡಲ ಪಂಚಾಯತಿ ವ್ಯಾಪ್ತಿಗೆ ಬರುವ ಮಿಂಡಿಗಲ್ ಮಜುರೆ ನಲ್ಲರಾಳ್ಳಹಳ್ಳಿ ಗ್ರಾಮದಲ್ಲಿ ನಿವೇಶನರಹಿತರ ಸಂಖ್ಯೆ ಎಷ್ಟು ಹಾಗೂ ಇದುವರೆಗೂ ಎಷ್ಟು ಜನ ಫಲಾನುಭವಿಗಳನ್ನು ಗುರುತಿಸಲಾಗಿದೆ.

ಆ) ಮೇಲ್ಕಂಡ ನಿವೇಶನರಹಿತರಿಗೆ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ ಇರುವ ತೊಡಕುಗಳೇನು?

ಇ) ಇನ್ನೆಷ್ಟು ಅವಧಿಯಲ್ಲಿ ನಿವೇಶನರಹಿತರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ನಿವೇಶನ ರಹಿತರ ಸಂಖ್ಯೆ ಒಟ್ಟು ೨೦ ಇದುವರೆಗೆ ೨೦ ಜನ ಫಲಾನುಭವಿಗಳನ್ನು ಗುರುತಿಸಲಾಗಿದೆ.

ಆ) ನಲ್ಲರಾಳ್ಳಹಳ್ಳಿ ಗ್ರಾಮದಲ್ಲಿ ಗುರುತಿಸಿರುವ ೨೦ಜನ ನಿವೇಶನರಹಿತರಿಗೆ ನಿವೇಶನಗಳನ್ನು ಹಂಚಲು ಗ್ರಾಮಠಾಣದಲ್ಲಿ ಜಮೀನು ಲಭ್ಯವಿರುವುದನ್ನು ಈಚೆಗೆ ಗುರುತಿಸಿದ್ದು ನಿವೇಶನ ಹಂಚಲು ಸಮಸ್ಯೆ ಇರುವುದಿಲ್ಲ.

ಇ) ತಾಲ್ಲೂಕಿನ ಶಾಸಕರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಸಮಿತಿ ರಚಿಸಲಾಗಿದೆ. ಈ ಸಮಿತಿ ಮುಂದಿನ ಕ್ರಮ ಜರುಗಿಸುವುದು.

ರಾಜ್ಯದ ಬೃಹತ್ ನೀರಾವರಿ ಯೋಜನೆಗಾಗಿ ವಿಶ್ವಬ್ಯಾಂಕ್ ನೆರವು.

3108-ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಬೃಹತ್ ನೀರಾವರಿ ಯೋಜನೆಗಳಿಗಾಗಿ ವಿಶ್ವಬ್ಯಾಂಕಿನಿಂದ ಈವರೆಗೆ ಪಡೆದಿರುವ ಆರ್ಥಿಕ ಸಹಾಯದ ಮೊತ್ತವೆಷ್ಟು?*

ಆ) *ಈ ಯೋಜನೆಯನ್ನು ಕ್ಲುಪ್ತ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ ವಿಶ್ವಬ್ಯಾಂಕ್ ತನ್ನ ನೆರವನ್ನು ನಿಲ್ಲಿಸುವ ವಿಚಾರದ ವರದಿಗಳು ನಿಜವೇ?*

ಇ) *ಕೃಷ್ಣಾ ಮೇಲ್ದಂಡೆ ಹಾಗೂ ಹೇಮಾವತಿ ಯೋಜನೆಗಳ ಪ್ರತಿ ಶತ ೧೦೦ ರಷ್ಟು ಕಾರ್ಯವನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಅವಧಿಬೇಕಾಗಬಹುದು?*

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

1978ರಿಂದ 1986ರ ವರೆಗೆ ಕಾರ್ಯಗತವಾದ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಮೊದಲ ಹಂತಕ್ಕೆ ವಿಶ್ವಬ್ಯಾಂಕಿನಿಂದ 117.64 ಮಿಲಿಯನ್ ಡಾಲರ್‌ಗಳ ನೆರವು ಸ್ವೀಕರಿಸಲಾಗಿದೆ. 1989ರಿಂದ ಕಾರ್ಯಗತಗೊಳ್ಳುತ್ತಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ೨ನೇ ಹಂತಕ್ಕೆ 325 ಮಿಲಿಯನ್ ಡಾಲರ್‌ಗಳ ನೆರವು ನೀಡಲು ವಿಶ್ವಬ್ಯಾಂಕ್ ಒಪ್ಪಿಕೊಂಡಿದ್ದು ಅದರಲ್ಲಿ ಇದುವರೆಗೂ 15.07 ಮಿಲಿಯನ್ ಡಾಲರ್‌ಗಳನ್ನು ಬ್ಯಾಂಕ್‌ನಿಂದ ಮರುಪಾವತಿ ಪಡೆಯಲಾಗಿದೆ.

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ೨ನೇ ಹಂತವನ್ನು ಪೂರ್ಣಗೊಳಿಸದಿದ್ದಕ್ಕಾಗಿ ವಿಶ್ವಬ್ಯಾಂಕ್ ನೆರವು ನಿಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ, ಏಕೆಂದರೆ ಈ ಯೋಜನೆಯನ್ನು 1996ರ ವೇಳೆಗೆ ಪೂರ್ಣಗೊಳಿಸಲು ಗುರಿ ಇಟ್ಟುಕೊಳ್ಳಲಾಗಿದೆ.

ಇ) ಕೃಷ್ಣಾಮೇಲ್ದಂಡೆ ಯೋಜನೆಯ ಮೊದಲ ಘಟ್ಟ ಮತ್ತು ಎರಡನೇ ಘಟ್ಟದ ಯೋಜನೆಗಳನ್ನು ಕ್ರಮವಾಗಿ 1996 ಮತ್ತು 2000 ಇಸವಿ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಹೇಮಾವತಿ ಯೋಜನೆಯನ್ನು 1995ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ನೀರಾವರಿ ಯೋಜನೆಗಳು

3004-ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?